**OS NO- 63/2017**
**PW. - 1**

**ದಿನಾಂಕಃ 02/06/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ – ಶ್ರೀ ವಿ ಎಂ ಎನ್ ವಕೀಲರಿಂದ ಪ್ರತಿವಾದಿ ನಂಃ1 ರವರ ಪರವಾಗಿ–</u>**

1. ನಾನು ಶಾಲೆ ಕಲಿತಿರುವುದಿಲ್ಲ. 2 ನೇ ವಾದಿ ಮತ್ತು ಪ್ರತಿವಾದಿ ನಂಃ 3 ರಿಂದ 7 ನನ್ನ ಅಕ್ಕತಂಗಿಯರು ಇದ್ದು, ಅವರೂ ಸಹ ಶಾಲೆ ಕಲಿತಿರುವುದಿಲ್ಲ. 2 ನೇ ಪ್ರತಿವಾದಿ ನನ್ನ ತಾಯಿಯಾಗಬೇಕು. ನನ್ನ ತಂದೆಯ ಹೆಸರು ಪುಂಡಪ್ಪ, 1 ನೇ ಪ್ರತಿವಾದಿಯಾಗಿರುತ್ತಾರೆ. ನನ್ನ ತಂದೆಯ ಹೆಸರು ಶಿವಯೋಗೆಪ್ಪ ಅಲ್ಲ ಎಂದರೆ ಸರಿ. ಶಿವಯೋಗೆಪ್ಪ ನನ್ನ ತಂದೆಯ ತಂದೆಯಾಗಬೇಕು. ನನ್ನ ತಂದೆ 1 ನೇ ಪ್ರತಿವಾದಿ ಗೋವಾದಲ್ಲಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಗೋವಾದಲ್ಲಿ ಕಂಪನಿ ಕೆಲಸ ಅಲ್ಲದೇ ಕೂಲಿ ಕೆಲಸವನ್ನೂ ಸಹ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ 1 ನೇ ಪ್ರತಿವಾದಿ ಗೋವಾದಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ನನ್ನ ಅಜ್ಜ ಸಹ ಗೋವಾದಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ನಮ್ಮ ಅಜ್ಜ ಸುಮಾರು 7–8 ವರ್ಷ ಬಟ್ಟೆ ವ್ಯಾಪಾರ ಮಾಡಿ

ಅನಂತರ ಊರಿಗೆ ಬಂದಿರುತ್ತಾರೆ. ನಮ್ಮ ಅಜ್ಜ ಬಟ್ಟೆ ವ್ಯಾಪಾರ ಮಾಡುತ್ತಿದ್ದಾಗ ನನಗೆ ಆಗ 10 ರಿಂದ 12 ವರ್ಷ ವಯಸ್ಸು ಇತ್ತು.

2. ಗೋವಾದಲ್ಲಿ ವಾಸ ಮಾಡುತ್ತಿದ್ದಾಗ ನಮ್ಮ ತಂದೆ ನಮ್ಮನ್ನು ಚೆನ್ನಾಗಿ ನೋಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಮ್ಮನ್ನು ನಮ್ಮ ಅಜ್ಜ ನೋಡಿಕೊಂಡಿರುತ್ತಾನೆ. ನಮ್ಮ ಅಜ್ಜ ನಮ್ಮನ್ನು ಗಂಗೂರ ಗ್ರಾಮದಲ್ಲಿ ಜೋಪಾನ ಮಾಡಿರುತ್ತಾನೆ. ನನ್ನ ಅಜ್ಜ ಗಂಗೂರ ಗ್ರಾಮಕ್ಕೆ ದುಡಿಯಲು ಬಂದಿದ್ದನು. ನನ್ನ ಅಜ್ಜನ ಮೂಲ ಊರು ಕಡ್ಲಿಮಟ್ಟಿ ಗ್ರಾಮ ಇರುತ್ತದೆ. ನನ್ನ ಅಜ್ಜ ಗಂಗೂರ ಗ್ರಾಮದಲ್ಲಿ 10 ರಿಂದ 15 ವರ್ಷ ಇದ್ದರು. ನನ್ನ ಅಜ್ಜ ಮೃತಪಟ್ಟು ಈಗ 4 ವರ್ಷಗಳಾಗಿರುತ್ತವೆ. ಈ ದಾವೆ ದಾಖಲಿಸಿದಾಗ ನನ್ನ ಅಜ್ಜ ಜೀವಂತ ಇದ್ದರು. ಈ ದಾವೆ ದಾಖಲಿಸಿದ 4 ವರ್ಷಗಳ ನಂತರ ನನ್ನ ಅಜ್ಜ ಮೃತಪಟ್ಟಿರುತ್ತಾರೆ.

3. ನನ್ನ ಅಜ್ಜನಿಗೆ ಒಟ್ಟು 6 ಜನ ಮಕ್ಕಳು ಇರುತ್ತಾರೆ. ಅವರುಗಳೆಂದರೆ ಬಸಪ್ಪ, ಸಿದ್ದಪ್ಪ, ರಂಗಪ್ಪ, ವಾರೆಪ್ಪ, ಮುದಿಯಪ್ಪ ಹಾಗೂ ನಮ್ಮ ತಂದೆ ಪುಂಡಪ್ಪ ಇರುತ್ತಾರೆ. ಇವರುಗಳಲ್ಲಿ ಮುದಿಯಪ್ಪ ಮೃತಪಟ್ಟಿದ್ದು, ಉಳಿದ 5 ಜನ ಮಕ್ಕಳು ಜೀವಂತ ಇರುತ್ತಾರೆ. ಬಸಪ್ಪ, ಸಿದ್ದಪ್ಪ ಮತ್ತು ಪುಂಡಪ್ಪ ಇವರು ಗಂಗೂರ ಗ್ರಾಮದಲ್ಲಿ ವಾಸಮಾಡುತ್ತಿದ್ದಾರೆ ಹಾಗೂ ವಾರೆಪ್ಪ, ರಂಗಪ್ಪ ಮತ್ತು ಮುದಿಯಪ್ಪ ಇವರು

ಕಡ್ಲಿಮಟ್ಟಿ ಗ್ರಾಮದಲ್ಲಿ ವಾಸಮಾಡುತ್ತಿದ್ದಾರೆ. 1 ನೇ ಪ್ರತಿವಾದಿ ಗಂಗೂರ ಗ್ರಾಮದಲ್ಲಿ ಸ್ವಲ್ಪದಿನ ಮತ್ತು ಗೋವಾದಲ್ಲಿ ಸ್ವಲ್ಪ ದಿನ ವಾಸಮಾಡುತ್ತಿದ್ದನು. ನನ್ನ ತಂದೆ 1 ನೇ ಪ್ರತಿವಾದಿ ಖಾಯಂತರೀಕವಾಗಿ ಗೋವಾದಲ್ಲಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿ.

4. ನನ್ನ ಅಜ್ಜ ಶಿವಯೋಗೆಪ್ಪನ ಮೂಲ ಆಸ್ತಿಗಳು ಗಂಗೂರ, ದೇವೂರ ಮತ್ತು ಕಮ್ಮಲದಿನ್ನಿ ಗ್ರಾಮಗಳಲ್ಲಿ ಇರುತ್ತವೆ. ಈ ಮೂರು ಊರುಗಳಲ್ಲಿ ಹೊರತುಪಡಿಸಿ ಬೇರೆ ಯಾವುದೇ ಊರುಗಳಲ್ಲಿ ನಮ್ಮ ಅಜ್ಜನ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಅಜ್ಜ ಮತ್ತು ನಾವು ಗಳಿಸಿದ ಆಸ್ತಿಗಳು ಇರುತ್ತವೆ. ದಾವಾ ಆಸ್ತಿಗಳೆಲ್ಲವೂ ನಮ್ಮ ಅಜ್ಜನ ಹೆಸರಿನಲ್ಲಿ ಖರೀದಿಯಾಗಿರುತ್ತವೆ ಎಂದರೆ ನಗೆ ಗೊತ್ತಿಲ್ಲ. ದಾವಾ ಆಸ್ತಿಗಳೆಲ್ಲವೂ ನಮ್ಮ ಅಜ್ಜನ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ. ನಮ್ಮ ಅಜ್ಜ ನಮ್ಮ ತಂದೆಗೆ ದಾವಾ ಆಸ್ತಿಗಳನ್ನು ಬಿಟ್ಟುಕೊಟ್ಟಿರುತ್ತಾರೆ. ದಾವಾ ಆಸ್ತಿಗಳು ನನ್ನ ಅಜ್ಜನ ಆಸ್ತಿಗಳು/ಪಿತ್ರಾರ್ಜಿತ ಆಸ್ತಿಗಳು ಅಲ್ಲ ಅಂತಾ ಸೂಚಿಸುವ ಸೂಚನೆಯು ಸರಿಯಲ್ಲ. ದಾವಾ ಆಸ್ತಿಗಳು 1 ನೇ ಪ್ರತಿವಾದಿ ಖರೀದಿ ಹಿಡಿದ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಅಜ್ಜ 1 ನೇ ಪ್ರತಿವಾದಿ ನನ್ನ ಅಜ್ಜ 1 ನೇ ಪ್ರತಿವಾದಿಗೆ ಯಾವ

ರೀತಿಯಾಗಿ ಬಿಟ್ಟುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಶಾಲೆ ಕಲಿತಿರದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ದಾವಾ ದಾಖಲಿಸುವಾಗ ನಾನು ಖರೀದಿ ದಾಖಲಾತಿಗಳನ್ನು ತೆಗೆಯಿಸಿ ನೋಡಿರುತ್ತೇನೆ. ದಾವಾ ಆಸ್ತಿಗಳನ್ನು ನನ್ನ ಅಜ್ಜ ನಾನು ಹುಟ್ಟುವ ಪೂರ್ವದಲ್ಲಿ ಸ್ವಲ್ಪ ಆಸ್ತಿಗಳನ್ನು ನಂತರ ನಾನು ಹುಟ್ಟಿದ ನಂತರ ಸ್ವಲ್ಪ ಆಸ್ತಿಗಳನ್ನು ಖರೀದಿ ಹಿಡಿದಿರುತ್ತಾನೆ. ಕಮ್ಮಲದಿನ್ನಿ ಆಸ್ತಿಗಳನ್ನು ನಾನು ಹುಟ್ಟಿದ 15 ವರ್ಷಗಳ ನಂತರ ಖರೀದಿ ಹಿಡಿದಿರುತ್ತಾರೆ. ದೇವೂರ ಗ್ರಾಮದ ಜಮೀನುಗಳನ್ನು ನನ್ನ ಅಜ್ಜ ನಾನು ಹುಟ್ಟುವ ಪೂರ್ವದಲ್ಲಿ ಖರೀದಿಸಿರುತ್ತಾರೆ. ಗಂಗೂರ ಗ್ರಾಮದ ಜಮೀನುಗಳನ್ನು ನನ್ನ ಅಜ್ಜ ನನಗೆ ತಿಳುವಳಿಕೆ ಬರುವ ಪೂರ್ವದಲ್ಲಿ ಖರೀದಿಸಿರುತ್ತಾರೆ. ದಾವಾ ಆಸ್ತಿಗಳು ನಮ್ಮ ಅಜ್ಜನ ಖರೀದಿಸಿದ ಆಸ್ತಿಗಳಾಗಿರುವುದರಿಂದ ನಮ್ಮ ಅಜ್ಜನ ಎಲ್ಲಾ ಮಕ್ಕಳಿಗೂ ದಾವಾ ಆಸ್ತಿಯಲ್ಲಿ ಪಾಲು ಇರುತ್ತದೆ ಅಂತಾ ಸೂಚಿಸುವ ಸೂಚನೆಯು ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಜ್ಜ ನಮ್ಮ ಅಪ್ಪ 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

6. ನಮ್ಮ ಅಜ್ಜ ಸಿದ್ದಪ್ಪ ಮತ್ತು ಬಸಪ್ಪನಿಗೆ ಗಂಗೂರ ಗ್ರಾಮದಲ್ಲಿರುವ ಬೇರೆ

ಗ್ರಾಮದ ಜಮೀನುಗಳನ್ನು ಬಿಟ್ಟುಕೊಟ್ಟಿರುತ್ತಾರೆ ಹಾಗೂ ರಂಗಪ್ಪ, ವಾರೆಪ್ಪ ಮತ್ತು ಮುದಿಯಪ್ಪ ಇವರಿಗೆ ಕಡ್ಲಿಮಟ್ಟಿಯಲ್ಲಿರುವ ಬೇರೆ ಜಮೀನುಗಳನ್ನು ಬಿಟ್ಟುಕೊಟ್ಟಿರುತ್ತಾರೆ. ಸಿದ್ದಪ್ಪ, ಬಸಪ್ಪ, ರಂಗಪ್ಪ, ವಾರೆಪ್ಪ ಮತ್ತು ಮುದಿಯಪ್ಪನಿಗೆ ಬಿಟ್ಟುಕೊಟ್ಟ ಜಮೀನುಗಳು ನಮ್ಮ ಅಜ್ಜನು ಖರೀದಿ ಹಿಡಿದಿರುವ ಜಮೀನುಗಳು ಆಗಿದ್ದವು. ನಮ್ಮ ಅಜ್ಜ ಶಿವಯೋಗೆಪ್ಪ ಎಲ್ಲಾ ಮಕ್ಕಳಿಗೆ ಒಂದೇ ಸಲ ಬಿಟ್ಟುಕೊಟ್ಟಿರುತ್ತಾನೆ ಅಥವಾ ಬೇರೆ ಬೇರೆಯಾಗಿ ಆಸ್ತಿಗಳನ್ನು ಬಿಟ್ಟುಕೊಟ್ಟಿರುತ್ತಾನೆ ನನಗೆ ಗೊತ್ತಿಲ್ಲ.

7. ದಾವಾ ಆಸ್ತಿಗಳು ಮೊದಲು ನನ್ನ ಅಜ್ಜ ಶಿವಯೋಗೆಪ್ಪನ ಹೆಸರಿನಲ್ಲಿ ಇದ್ದವು ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಹಾಜರಪಡಿಸಿರುತ್ತೇನೆ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಮ್ಮ ಅಜ್ಜ ಶಿವಯೋಗೆಪ್ಪ ದಾವಾ ಆಸ್ತಿಗಳನ್ನು ನಮ್ಮ ತಂದೆ 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾನೆ ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಹಾಜರಪಡಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು,

ಸಮಯಾವಕಾಶ ನೀಡಲಾಯಿತು.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ